ಅತಿ ಸಣ್ಣ ಕತೆ

# ಕೆಲವರಿಗಷ್ಟೇ ಗೊತ್ತಿರುವ ಕತೆ

ಶ್ರೀ ದತ್ತಾತ್ರೇಯ ನಾಟಕ ಕಂಪನಿಯ ನಟ ಶಾಂತಣ್ಣ ಪೂಜೆಗೆ ಹೂ ಕೀಳಕೆ ಬೆಳಕು ಹರಿಯೋಕೂ ಮೊದಲೇ ಮನೆ ಮನೆ ಕಾಂಪೋಂಡು ನೋಡ್ಕೋತಾ ಹೊರಟಿದ್ದ. ಅಲ್ಲೇ ಒಂದು ಕಾಂಪೋಂಡಿಗೆ ಒರಕ್ಕೊಂಡು ಜಯದೇವಾ ಬೀಡಿ ಸೇದ್ತಾ ನಿಂತಿದ್ದ. ಸಾವು ಇವನನ್ನ ನೋಡಿ ನಕ್ಕ. ಒನ್ನತಿ ತಲೆಯಾಡುಸ್ದ. ಬಾ ಅಂತ ಕರೆದಂಗಾಯ್ತು ಶಾಂತಣ್ಣಂಗೆ. ಹಿಂತಿರುಗಿ ಓಡಿದ ಶಾಂತಣ್ಣ ನಿಂತಿದ್ದು ಕಂಪನಿ ಕ್ಯಾಂಪ್ ಮನೆ ಸೇರಿದಾಗಲೇ.

ಇನ್ನೂ ಮಲಕ್ಕೊಂಡಿದ್ದ ಯಜಮಾನರ ಕಾಲು ಹಿಡಿದ. ಯಜಮಾನ್ರು "ಯಾಕೋ ಶಾಂತಾ" ಅಂದ್ರು. "ಇಲ್ಲೇ ಮುಂದಿನ ಕ್ರಾಸ್ನಗೆ ಸಾವು ನಿಂತಿದ್ದ. ನಂಗೆ ಬಾ ಅಂತಂದ. ಇವತ್ತೇ ಊರು ಬಿಡಬೇಕು. ಯಾವ್ದಾನಾ ಬಸ್ಸತ್ತಿ ರಾತ್ರಿಗೆಲ್ಲಾ ಜಮಖಂಡಿ ಸೇರ್ಕಂತೀನಿ. ರೊಕ್ಕ ಬೇಕು. ಐವತ್ತಾನಾ ಬೇಕು" ಅಂತಂದ. "ಸರಿ ತಗಾ" ಅಂತಂದ್ರು ಯಜಮಾನ್ರು. ಜೇಬಿಗೆ ರೊಕ್ಕ ತುಂಬ್ಕೊಂಡ ಶಾಂತಣ್ಣ ರಾತ್ರಿ ಜಮಖಂಡಿ ಸೇರ್ಕೊಂಡ.

ಇತ್ಲಗೆ ಈ ಸಾವು ಅನ್ನನು ಹೆಂಗಿರ್ತಾನೆ ನೋಡಬೇಕೂ ಅನ್ನುಸ್ತು ಯಜಮಾನ್ರಿಗೆ. ಮುಂದಿನ ಕ್ರಾಸ್‌ನಲ್ಲಿ ಅದೇ ಕಾಂಪೋಂಡಿಗೆ ಒರಕ್ಕೊಂಡು, ಬೀಡಿ ಸೇದ್ತಾ ನಿಂತಿದ್ದ ಸಾವು. ಅವನನ್ನ ನೋಡ್ದೋರೆ, "ಯಾಕಪಾ ನಮ್ ಶಾಂತಣ್ಣನ್ನ ನೋಡಿ ಕಣ್ಣಾಡುಸ್ದ್ಯಂತೇ? ಅವನು ನೋಡು ಓಡೇ ಹೋದ. ಸಾಯಂಕಾಲದೊತ್ಗೆ ಜಮಖಂಡಿ ಸೇರ್ಕಂಡಿರ್ತಾನೆ. ಇವತ್ತಿನ ಶೋ ಮಾಡರು ಯಾರು ಹೇಳು ಮತೆ?" ಅಂತಂದ್ರು ಯಜಮಾನ್ರು.

ಅದಕ್ಕೆ ಸಾವು "ನಾನೆಲ್ಲಿ ಕಣ್ಣಾಡುಸ್ದೇ? ಇವತ್ತು ರಾತ್ರಿ ಅವ್ನನ್ನ ಜಮಖಂಡೀನಿಂದ ಹೊತ್ಗೆಂಡು ಹೋಗಬೇಕಿತ್ತು, ಯಾಕಪಾ ತಮಾ ಯಿನ್ನೂ ಯಿಲ್ಲೇ ಯಿದೀಯಾ ಅಂತ ಕೇಳುದೆ ಅಷ್ಟೇ. ನಾನಿನ್ನು ಬರ್ತೀನಿ" ಅಂತಂದು ಬೀಡೀನ್ನ ಅತ್ಲಗೆ ವಗದು ಹೋದ.

ಅದಕ್ಕೇ ಹಿರಿಯರು ಹೇಳಿದ್ದು, ಪಾತಾಳಕ್ಕೋದ್ರೂ ಸಾವು ಬಿಡಂಗಿಲ್ಲ ಅಂತ. ❖

